**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ: ಕೇಂದ್ರ ಕಛೇರಿ: ಬೆಂಗಳೂರು**

**ಪತ್ರಿಕಾ ಪ್ರಕಟಣೆ**

**ವಿಷಯ: ಕೆಎಸ್ಆರ್ ಟಿಸಿಗೆ ಪ್ರತಿಷ್ಠಿತ ಭಾರತ ಸರ್ಕಾರದ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯದ Award of Excellence ಪ್ರಶಸ್ತಿ-2018**

ಕೆಎಸ್ಆರ್ ಟಿಸಿಯು ಅನುಷ್ಠಾನ ಗೊಳಿಸಿರುವ ಯಶಸ್ವಿ ಉಪಕ್ರಮವಾದ ಸಣ್ಣ ಮತ್ತು ಮಧ್ಯಮ ನಗರ ಹಾಗೂ ಪಟ್ಟಣಗಳಲ್ಲಿ ನಗರ ಸಾರಿಗೆ ಸೇವೆಗೆ, ಭಾರತ ಸರ್ಕಾರದ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ Award of Excellence ಪ್ರಶಸ್ತಿಯು ಲಭಿಸಿರುತ್ತದೆ.

ಪ್ರಶಸ್ತಿ ಪತ್ರದಲ್ಲಿ ಸರ್ಕಾರಿ ಸಾರಿಗೆ ಸಂಸ್ಥೆಗಳು ನಗರ ಪ್ರದೇಶದಲ್ಲಿ ವ್ಯವಸ್ಥಿತವಾಗಿ ಸಾರ್ವಜನಿಕ ಸಾರಿಗೆ ಪರಿಚಯಿಸಿ ಅಭಿವೃದ್ಧಿಪಡಿಸಬಹುದು ಎಂಬುದನ್ನು ಸಂಸ್ಥೆ ತೋರಿಸಿಕೊಟ್ಟಿರುವುದು ಮಾತ್ರವಲ್ಲ, ನಗರ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣದ ಅವಧಿ ಮತ್ತು ದರವನ್ನು ಕಡಿತಗೊಳಿಸುವ ಬಗ್ಗೆಯೂ ಹಾಗೂ ಪ್ರಯಾಣಿಕರ ಸುರಕ್ಷತಾ ಸೌಲಭ್ಯಗಳನ್ನು ಉನ್ನತಮಟ್ಟಕೇರಿಸಿದೆ ಎಂದು ತಿಳಿಸಲಾಗಿದೆ.

ಕೆ ಎಸ್ ಆರ್ ಟಿ ಸಿ ಯು ಒಟ್ಟು 16 ಸಣ್ಣ ಹಾಗೂ ಮಧ್ಯಮ ನಗರ ಮತ್ತು ಪಟ್ಟಣಗಳಲ್ಲಿ ,ಪ್ರತಿದಿನ 786 ಬಸ್ಸುಗಳನ್ನು, 11075 ಟ್ರಿಪ್ ಗಳನ್ನು, ಕಾರ್ಯಚರಣೆ ಮಾಡಿ 5.10 ಲಕ್ಷ ಪ್ರಯಾಣಿಕರು ಈ ಬಸ್ಸುಗಳಲ್ಲಿ ಸಂಚರಿಸುತ್ತಿದ್ದಾರೆ.

ಸದರಿ ಪ್ರಶಸ್ತಿಯನ್ನು ದಿನಾಂಕ 4 ನೇ ನವೆಂಬರ್ 2018 ನಾಗ್ಪುರ, ಮಹಾರಾಷ್ಟ್ರ ದಲ್ಲಿ ನಡೆದ 11ನೇ Urban Mobility ಸಮ್ಮೇಳನ ಮತ್ತು ಪ್ರದರ್ಶನ ದಲ್ಲಿ , ನಾಗಪುರ್ ನಗರ ಪಾಲಿಕೆಯ ಪೂಜ್ಯ ಮೇಯರ್ ರವರು ಕೆಎಸ್ಆರ್ಟಿಸಿಗೆ ಪ್ರಶಸ್ತಿ ಪ್ರದಾನ ಮಾಡಿದರು.

**ಸಹಿ/-**
**ಸಾರ್ವಜನಿಕ ಸಂಪರ್ಕಾಧಿಕಾರಿ**